## ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

### (i) ಭದ್ರಾ ಬಲದಂಡೆ ಕಾಲುವೆಯ ಚಾನಲ್ ಒಡೆದು ಹೋಗಿರುವ ಬಗ್ಗೆ

ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರದಿಂದ ಉತ್ತರ ತರಿಸುವ ವ್ಯವಸ್ಥೆ ತಾವು ಮಾಡಿಕೊಟ್ಟಿದ್ದೀರಿ. ನಾನು ತಮ್ಮಿಂದ ಕೆಲವು ಉತ್ತರಗಳನ್ನು ನಿರೀಕ್ಷೆ ಮಾಡಿದ್ದೆ. ಈಗಾಗಲೇ ಎರಡು ದಿವಸ ಸಭೆ ಇರುವುದಿಲ್ಲ. ಆ ಕಾರಣ ನಾನು ಟೆಲಿಫೋನ್ ಟ್ಯಾಪಿಂಗ್ ಹಗರಣಗಳಲ್ಲಿ ಕಾಲ ನಿಗದಿ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿದ್ದೆ. ತಮ್ಮಿಂದ ಉತ್ತರ ಬರಲಿಲ್ಲ. ಆದರೂ ನಾನು ಇವತ್ತು ಕೂಡ ನಿರೀಕ್ಷೆ ಮಾಡುತ್ತೇನೆ. ಇನ್ನೊಂದು ಪ್ರಿವಿಲೇಜ್ ಮೋಷನ್‌ನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಟ್ಟಿದ್ದೇನೆ. ಅದಕ್ಕಾಗಿ ತಾವು ಸರ್ಕಾರಕ್ಕೆ ಒತ್ತಾಯ ಮಾಡುವುದು. ತಮ್ಮನ್ನು ನಾನು ಒತ್ತಾಯ ಮಾಡುವುದು ಕಷ್ಟವಾಗುತ್ತದೆ. ಮತ್ತು ಮೂರನೆಯದಾಗಿ ಗ್ರಾನೈಟ್ ಹಗರಣದಲ್ಲಿ ಒಂದು ಸಮಿತಿಯನ್ನು ಮಾಡಬೇಕೆಂದು ತಮಗೆ ಅದರ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ಈ ಮೂರು ವಿಚಾರಗಳಲ್ಲಿ ತಾವು ಇವತ್ತು ಏನಾದರೂ ಒಂದು ನಿರ್ಣಯ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ. ಮೋಹನ್ ಮೆಕನ್ಸ್ ಬಗ್ಗೆ ನಾನು ಕಳುಹಿಸಿದ್ದ ಪ್ರಿವಿಲೇಜ್ ಮೋಷನ್ ಬಗ್ಗೆ ಒಂದು ತೀರ್ಮಾನ ಕೊಡುತ್ತೀರಾ ಇವತ್ತು.....

ಅಧ್ಯಕ್ಷರು : ಕೆಲವು ಹಕ್ಕು ಭಾದ್ಯತಾ ಸೂಚನೆಗಳು ಮತ್ತು ಕೆಲವು ರೂಲಿಂಗ್ ನನ್ನ ಕಡೆಯಿಂದ ಬರಬೇಕಾಗಿದೆ. ಅವುಗಳು ಬಹಳ ಗಹನವಾದಂತಹ ವಿಚಾರಗಳನ್ನು ಒಳಗೊಂಡಿರುವಂತಹವು. 4-6 ಡಾಕ್ಯುಮೆಂಟ್‌ಗಳನ್ನು ಇಂಡೆಕ್ಸ್ ಸ್ಪದಿ ಮಾಡಬೇಕಾಗಿರತಕ್ಕಂಥ ವಿವರಗಳು ಆದುವಿನಿಂದ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ಹೈ ಕೋರ್ಟಿನ ಜಡ್ಜ್‌ಮೆಂಟ್ ಇದೆ. ಒಂದಕ್ಕೊಂದು ಹೇಳಿಕೆಗಳು ಇವೆ. ಮರು ಹೇಳಿಕೆಗಳು ಇವೆ. ಅನಂತರ ವಿವರಗಳು ಇವೆ. ಅವ್ಹರಿಂದ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. 27 ರಂದು ಕೊನೆಯ ದಿವಸ ಅಧಿವೇಶನ ಅಡ್‌ಜರ್ನ್ ಆಗುವುದು ಅದರೊಳಗೆ ನನ್ನ ಮೇಲೆ ಉಳಿದಿರುವ ಬಾಕಿ ಕೆಲಸ ಏನು ಇವೆ ; ಅದನ್ನೆಲ್ಲಾ ನಾನು ಮುಗಿಸುತ್ತೇನೆ.

+ಶ್ರೀ ಬಿ. ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ ಭದ್ರಾಬಲ ದಂಡೆ ಕಾಲುವೆಯ ಒಂದು ಚಾನಲ್ ಒಡೆದು ಹೋಗಿ ಸುಮಾರು 90 ಸಾವಿರ ಹೆಕ್ಟೇರ್ ಜಮೀನು ಹಾಳಾಗಿ ಹೋಗುತ್ತಿದೆ. ಕುಡಿಯುವ ನೀರು ಮತ್ತು ರೈತರಿಗೆ ನೀರು ಸಿಗದಂತಹ ವಿಚಿತ್ರ ಪರಿಸ್ಥಿತಿ ಬಂದಿದೆ. ಇವರ ದುಶ್ಪರಿಣಾಮ ರೈತರ ಮೇಲೆ ಏನಾಗಬಹುದು, ಎಲ್ಲಾ ಅಧಿಕಾರಿಗಳು ಅಲ್ಲಿ ಹೋಗಿದ್ದಾರೆ, ನಾನು ಕೇಳಿದ್ದೇನೆ. ಪತ್ರಿಕೆಯಲ್ಲಿ ಪ್ರಮುಖವಾಗಿ ಅದು ಬಂದಿಲ್ಲ. ಸನ್ಮಾನ್ಯ ನೀರಾವರಿ ಸಚಿವರು ಇದ್ದಾರೆ. ಶಿವಮೊಗ್ಗದಿಂದ ದಾವಣಗೆರೆಯವರೆಗೆ ಎಡ ಬಲದಲ್ಲಿ ಏನು ಇದೆ ಕಂಪ್ಲೀಟ್ ಅಲ್ಲಿ ಇರುವಂತಹ ರೈತರು ಬೀದಿ ಪಾಲಾಗುವಂತಹ ಒಂದು ವಿಚಿತ್ರ ಪರಿಸ್ಥಿತಿ ಒದಗಿ ಬಂದಿದೆ. 90 ಸಾವಿರ ಹೆಕ್ಟೇರ್ ಜಮೀನಿನ ಮೇಲೆ ಇದು ಕೆಟ್ಟ ಪರಿಣಾಮವನ್ನು ಬೀರುತ್ತಿದೆ. ಇಲ್ಲಿ ನೀರಾವರಿ ಸಚಿವರು ಇದ್ದಾರೆ.

ಅದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಚಾನಲ್ ಒಡೆದಿರುವುದರಿಂದ ತರೀಕೆರೆಯಿಂದ ದಾವಣಗೆರೆಗೆ ಕುಡಿಯುವ ನೀರಿಗೆ ಎಫೆಕ್ಟ್ ಆಗುತ್ತದೆ. ಇಲ್ಲಿರುವ ಅಡಿಕೆ, ತೆಂಗು, ಕಬ್ಬು, ಭತ್ತ ಇವೆಲ್ಲವಕ್ಕೂ ತೊಂದರೆಯಾಗುತ್ತದೆ.

ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡುತ್ತಾರೆ. ರೇಷ್ಮೆ ಹುಳು ವಿಚಾರದಲ್ಲಿ 25ನೇ ತಾರೀಖು ಚರ್ಚೆ ಮಾಡೋಣ.

ಶ್ರೀ ಎಂ. ಎಸ್. ಪಾಟೀಲ್ : ಅಧ್ಯಕ್ಷರೆ, ಇದರ ಬಗ್ಗೆ ಆಮೇಲೆ.....

ಪ್ರವಾಸ ಪೀಡಿತ ಪ್ರದೇಶಗಳಿಗೆ ಪರಿಹಾರ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೆ, ಪ್ರವಾಸ ಪೀಡಿತ ಪ್ರದೇಶಗಳಿಗೆ ಪರಿಹಾರದ ಬಗ್ಗೆ ನಾವು ಒಂದೇ ಸಮನೆ ಚರ್ಚೆಗೆ ಕೇಳುತ್ತಿದ್ದೇವೆ. ತಾವು ನಾಳೆ ಅಥವಾ ನಾಡಿದ್ದು ಚರ್ಚೆ ಮಾಡೋಣವೆಂದು ಹೇಳಿದ್ದಿರಿ. ತಮಗೆ ನಾನು ಹೇಳುತ್ತಿದ್ದೇನೆ. ಮಂಡ್ಯ ಮೈಸೂರು ಹಾಸನ ಈ ಪ್ರದೇಶಗಳಲ್ಲಿ ಪ್ರವಾಸ ಪೀಡಿತಕ್ಕೆ ಒಳಗಾಗಿರುವಂತಹ ಜನ ಅನುಭವಿಸುತ್ತಾ ಇರುವಂತಹ ಕಷ್ಟಗಳಿಗೆ ಇವತ್ತಿನವರೆಗೂ ಪರಿಹಾರ ಕೊಟ್ಟಿಲ್ಲ. ಸಮಗ್ರವಾಗಿ ಈ ಸಭೆಯಲ್ಲಿ ಚರ್ಚೆಯಾಗಬೇಕಾಗಿದೆ. ಪ್ರತಿಯೊಂದನ್ನೂ ತಾವು 25,27 ಎಂದು ಹೇಳಿದರೆ ಅವತ್ತು 30 ಗಂಟೆ ಇರುವುದಿಲ್ಲ, 24 ಗಂಟೆನೆ ತಮಗೆ ತೊಂದರೆ ಕೊಡುವಂತಹ ಪರಿಸ್ಥಿತಿಗೆ ನಾವು ಹೋಗುತ್ತೇವೆ. ದಯವಿಟ್ಟು ಒಂದು ವಾರ ಸಭೆಯನ್ನು ಮುಂದಕ್ಕೆ ಹಾಕುವುದಾದರೆ ಅವನ್ನು ಸ್ವಲ್ಪ ಚರ್ಚೆ ಮಾಡಬಹುದು.

ಅಧ್ಯಕ್ಷರು : ಸದನ ಕಾರ್ಯಕಲಾಪಗಳ ಸಮಿತಿ ಸಭೆ ಕರೆಯುತ್ತೇವೆ ಅಲ್ಲಿ ನೀವು ಸಲಹೆ ಮಾಡಿ. ಕಾವೇರಿ ಚರ್ಚೆ ಅಪೂರ್ಣವಾಗಿದೆ. ನೀವು ಪ್ರಾರಂಭ ಮಾಡಿರುವಂತಹ ಚರ್ಚೆಯನ್ನು 25 ಅಥವಾ 26ಕ್ಕೆ ಮುಂದುವರಿಸೋಣ.

ಶ್ರೀ ವಾಟಾಳ್ ನಾಗಾರಾಜ್ : ನಾವೆಲ್ಲಾ ಸಹಿ ಹಾಕಿ ಕೊಟ್ಟಿರುವಂತಹದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ : ಅಧ್ಯಕ್ಷರೆ, ನಾನು ಇವತ್ತಿ ಉತ್ತರ ಹೇಳುತ್ತೇನೆ. ಅಧ್ಯಕ್ಷರೆ, ಇದು ತಮಗೆ ಗೊತ್ತಿದೆ. ಇದು ಶ್ರೀಮಾನ್ ಚಂದ್ರೇಗೌಡರು ಅವನ್ನು ಲೈಸ್ ಮಾಡಿದ ಮೇಲೆ ನಾನು ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ ಮತ್ತು ಪರಿಹಾರ ಕೊಟ್ಟಿದ್ದೇನೆ ಅವನ್ನು ಕೂಡ ಸನಕ್ಯುಲೇಟ್ ಮಾಡಿದ್ದೇನೆ. ಅದರ ಮೇಲೆ ಚರ್ಚೆ ಅಪೂರ್ಣವಾಗಿ ಉಳಿದಿದೆ ಅಷ್ಟೇ. ಸ್ಟೇಟ್‌ಮೆಂಟ್ ಮಾಡಿಲ್ಲ. ಅಂದರೆ ಅದು ಸರಿಯಲ್ಲ. ತಾವು ಆ ದಿವಸ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಸ್ವಲ್ಪ ಚರ್ಚೆ ಅಪೂರ್ಣವಾಗಿದೆ. ಹೇಳಿಕೆ ಪ್ರತಿ ಬಂದಿದೆ. ಸರ್ಕಾರ ಸರಿಯಾಗಿ ಆ ಪ್ರದೇಶ ನೋಡಲಿಲ್ಲ. ಮಂಡ್ಯ ಮೈಸೂರು, ಹಾಸನ ಪ್ರದೇಶವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅಲ್ಲಿ ಆಗಿರತಕ್ಕ ಪರಿಸ್ಥಿತಿ ಬೇರೆ ದುರಂತಕ್ಕೆ ಸಿಕ್ಕಿರತಕ್ಕ ಪರಿಸ್ಥಿತಿ ಬೇರೆ ಇವರು ಕೊಟ್ಟಿರತಕ್ಕಂಥ ಹೇಳಿಕೆ ಬೇರೆ. ಇವಕ್ಕಾಗಿ ಸಮಗ್ರವಾಗಿ ಚರ್ಚೆ ಆಗಬೇಕೆಂದು ತಮ್ಮಲ್ಲಿ ಕೇಳಿದ್ದು.

ಶ್ರೀ ಬಿ.ಪಿಚ್. ಬನ್ನಿಕೋಡ್ : ಅಧ್ಯಕ್ಷರೇ, 11 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಒಂದು ಪೈಸೆ ಹಣ ಬಿಡುಗಡೆ ಆಗಿಲ್ಲ. ರಸ್ತೆಗಳು ಹಾಳಾಗಿ ಹೋಗಿವೆ.

(iii) ಸಹಕಾರಿ ಸಂಘಗಳಿಗೆ ಚುನಾವಣೆ

+ ಶ್ರೀ ಆರ್. ವಿ. ದೇಶಪಾಂಡೆ : ಅಧ್ಯಕ್ಷರೆ, ಸರ್ಕಾರದ ಆದೇಶದ ಪ್ರಕಾರ ಇವೀ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆ ಆಗುತ್ತಿದೆ. ಆದರೆ ಈ ಚುನಾವಣೆಯಲ್ಲಿ ಈಗಾಗಲೇ ಯಾರು ದಿಫಾಲ್ಟರ್ಸ್ ಇದ್ದಾರೆ ಅವರಿಗೆ ತಾವು ಪೋಟಿಂಗ್ ರೈಟ್ ಕೊಟ್ಟಿರಿ. 10 ನೇ ತಾರೀಖು ಮುಗಿಯಿತು. 10-9-91 ಕ್ಕೆ ಆ ಆಜ್ಞೆ ಮುಗಿದಿದೆ. ಇದರ ಮುಂದೆ ಚುನಾವಣೆ ವಿನಾಗುತ್ತದೆ ಅದು ಬಹಳ